ವರ್ತಮಾನದಲ್ಲಿ ಕಲಾವಿದರ ಹೊಟ್ಟೆಪಾಡಿನ ಸಾಧನಗಳಾಗಿ ರೂಪಾಂತರಗೊಂಡಿದ್ದವು. ಭಾರತದಲ್ಲಿ ಚರಿತ್ರೆಗಿಂತ ಹೆಚ್ಚಾಗಿ ಪುರಾಣವು ಬೀದಿ ರಂಗಭೂಮಿಗೆ ಅವತರಿಸುತ್ತದೆ. ಅಪ್ಪಟ ಲೌಕಿಕ ಬದುಕಿನ ಸನ್ನಿವೇಶಗಳನ್ನೇ ವೇಷಗಾರಿಕೆಯ ಮೂಲಕ ಪ್ರದರ್ಶಿಸುತ್ತಿದ್ದ ಜಾತಗಾರ ಕಲೆ ಕಣ್ಮರೆಯಾಗಿದೆ. ಆದರೆ ಹಗಲು ವೇಷಗಾರರು ಮಾತ್ರ, ರಾಮಾಯಣ ಮಹಾಭಾರತವನ್ನು ಬೀದಿಯಲ್ಲಿ, ಜಾತ್ರೆ ಹಬ್ಬಗಳಲ್ಲಿ ಮರುಸೃಷ್ಟಿ ಮಾಡುತ್ತಲಿದ್ದಾರೆ. ನಾಗರಿಕ ಸಮಾಜವು, ಆಧುನಿಕತೆಯ ಬದುಕಿನಲ್ಲಿ ಕಳೆದುಕೊಂಡ ಪರಂಪರೆಯನ್ನು, ಭಾವುಕವಾಗಿ ಮತ್ತು ಸಾಂಕೇತಿಕವಾಗಿ ಪಡೆದುಕೊಂಡು, ನಚ್ಚಗಿನ ಭಾವ ಅನುಭವಿಸುತ್ತದೆ. ಎಂತಲೇ ಪಾರಂಪರಿಕ ಕಲೆಗಳು ನಗರ ಬದುಕಿನಲ್ಲೇ ಮರುಹುಟ್ಟು ಪಡೆಯುತ್ತಿವೆ.

ಈ ಹಿನ್ನೆಲೆಯಲ್ಲಿ ರಾಜಸ್ತಾನದ ಪ್ರವಾಸೋದ್ಯಮ ಗಮನಿಸಬೇಕು. ಅದರುಸಿರು ನಿಂತಿರುವುದು ರಾಜಪ್ರಭುತ್ವದ ಸಂಕೇತಗಳಾಗಿರುವ ಅರಮನೆ, ಕೋಟೆ ಕೊತ್ತಲಗಳಿಂದ ಮಾತ್ರವಲ್ಲ; ಅವುಗಳ ಮಧ್ಯೆ ಕೂತು ಹಾಡುವ ಜನಪದ ಗಾಯಕರಿಂದ ಕೂಡ. ಮಿರಾಶಿ ಸಮುದಾಯಕ್ಕೆ ಸೇರಿದ ರಾಜಸ್ತಾನಿ ಗಾಯಕರು ಪ್ರವಾಸಿಗರ ಪ್ರಧಾನ ಆಕರ್ಷಣೆ. ಅತಿಥಿಗಳನ್ನು ರಂಜಿಸಲು ಸ್ಟಾರ್ ಹೋಟೆಲುಗಳು ಅತ್ಯುತ್ತಮ ಗಾಯಕರನ್ನು ನೇಮಿಸಿಕೊಂಡಿವೆ. ಇದೊಂದು ಬಗೆಯಲ್ಲಿ ಸ್ಥಳೀಯ ಸಂಸ್ಕೃತಿಯನ್ನು ಜಾಗತಿಕ ಮಾರುಕಟ್ಟೆಯಲ್ಲಿಟ್ಟು ಮಾರುವಿಕೆ ಹೌದು. ಆದರೆ ಗಾಯಕರು ತಮ್ಮೂರ ಬೀದಿಗಳಲ್ಲಿ ಪಡೆಯುವುದಕ್ಕಿಂತ ಹೆಚ್ಚಿನ ಗೌರವವರಮಾನ ಗಳಿಸಿ ನೆಮ್ಮದಿಯ ಬದುಕು ನಡೆಸುತ್ತಿದ್ದಾರೆ. ಇಲ್ಲಿ ರಾವಣಹತ್ತ, ಸುರಬಹಾರ್, ಸಾರಂಗಿ, ಏಕತಾರಿ ನುಡಿಸುತ್ತ ಹಾಡುವ ಸಾವಿರಾರು ಕುಟುಂಬಗಳಿವೆ. ಮರುಭೂಮಿಯ ಕಠೋರತೆಯನ್ನು ಎದುರಿಸಲೆಂದೇ ಇವರ ವಾದ್ಯ ಮತ್ತು ಕಂಠಗಳು ರೂಪುಗೊಂಡವೋ ಏನೊ? ಕೆಲವು ಪ್ರತಿಭಾವಂತರು ವೃತ್ತಿಗಾಯಕರಾಗಿ ಸಿನಿಮಾರಂಗಕ್ಕೂ ದಾಟಿದ್ದಾರೆ. ದೊಡ್ಡ ಪ್ರಶಸ್ತಿಗಳನ್ನು ಪಡೆದಿದ್ದಾರೆ. ರೇಶ್ಮಾ, ಪಾರ್ವತಿಬಾವುಲ್, ಟಿಪಾನಿಯಾ, ಮುಖ್ತಿಯಾರಲಿ ಮುಂತಾದವರು ಬೀದಿಯಿಂದ ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆದವರು; ಮೈಕೇಲ್ ಜಾಕ್ಸನ್ ಕೂಡ ಬೀದಿಗಾಯಕನಾಗಿದ್ದ ತಾನೇ? ಪಾಶ್ಚಿಮಾತ್ಯ ಪಾಪ್ ಸಂಗೀತವೇ ಕುಲೀನರು, ಗಣ್ಯರು ಥಿಯೇಟರಿನಲ್ಲಿ ಆಸ್ವಾದಿಸುವ ಅಭಿಜಾತ ಸಂಗೀತಕ್ಕೆ ಪರ್ಯಾಯವಾಗಿ ಹುಟ್ಟಿದ್ದು.

ಯೂರೋಪಿನ ಬೀದಿಕಲಾವಿದರು ನುಡಿಸುವ ವಾದ್ಯಗಳನ್ನು ಗಮನಿಸಿದೆ. ಅವುಗಳಲ್ಲಿ ಅರ್ಧಕ್ಕಿಂತ ಹೆಚ್ಚು ನಮ್ಮಲ್ಲಿ ಬಂದಿವೆ. ಯೂರೋಪಿನ ದೇಶವೊಂದು ಎರಡು ಶತಮಾನ ಆಳಿದ ದೇಶದಲ್ಲಿ ಇದೇನೂ ವಿಶೇಷ ಸಂಗತಿಯಲ್ಲ. ಆದರೆ ಇವು ನಮ್ಮ ರಂಗಭೂಮಿ, ಶಾಸ್ತ್ರೀಯ ಸಂಗೀತ, ಧಾರ್ಮಿಕ ಕಾರ್ಯಕ್ರಮಗಳಲೆಲ್ಲ ನುಸುಳಿಹೋಗಿ ನೆಲೆಸಿರುವುದು ವಿಶೇಷ. ವಯಲಿನ್ ಹಿಡಿದು ತತ್ವಪದ ಹಾಡುತ್ತಿದ್ದ ಮಾರೆಪ್ಪದಾಸರು,


ಮ್ಯೂನಿಕ್‌ನಲ್ಲಿ ಕಂಡ ಗಿಟಾರ್ ವಾದಕ

ಹಾರ್ಮೋನಿಯಂ ನುಡಿಸುತ್ತಿದ್ದ ಪುಟ್ಟರಾಜ ಗವಾಯಿಗಳು, ಕ್ಲಾರಿಯೋನೆಟ್ ನುಡಿಸುತ್ತಿದ್ದ ಕದ್ರಿ ಗೋಪಾಲಕೃಷ್ಣ ನೆನಪಾಗುತ್ತಾರೆ. ಇಟಲಿಯ ಕಲಾಶಾಲೆಯಲ್ಲಿ ಬೀದಿ ಕಲಾವಿದರನ್ನು ಕುರಿತ ಒಂದು ವರ್ಣಚಿತ್ರ ನೋಡಿದೆ. ಅದರಲ್ಲಿ ಹಿರಿಯ ಕಲಾವಿದರು ಬೇರೆಬೇರೆ ವಾದ್ಯ ನುಡಿಸುತ್ತಿರುವಾಗ, ಹುಡುಗನೊಬ್ಬ ತ್ರಿಕೋನಾಕಾರ ಕಬ್ಬಿಣದ ಸಲಾಕಿಯನ್ನು ರಾಡಿನಿಂದ ಬಾರಿಸುತ್ತಿರುವ ದೃಶ್ಯವಿತ್ತು. ಡಂಕವೆಂದು ಕರೆಯಲಾಗುವ ಈ ವಾದ್ಯ ಹೈದರಾಬಾದ್ ಕರ್ನಾಟಕದ ಭಜನಾ ತಂಡಗಳಲ್ಲಿದೆ. ಯೂರೋಪಿಗೆ ಇದು ಈಜಿಪ್ಟಿನಿಂದ ಬಂತಂತೆ. ಈಜಿಪ್ಟಿಗೆ ಎಲ್ಲಿಂದ ಹೋಯಿತೊ? ವಾದ್ಯಗಳ ಪಯಣ ಊಹಾತೀತ. ಬೀದಿಕಲಾವಿದರು ಅಲೆಮಾರಿಗಳಾದ ಕಾರಣ, ವಾದ್ಯಗಳು ಮಾತ್ರವಲ್ಲ, ರಾಗ ಲಯಗಳೂ ಅಲೆದಾಡುತ್ತವೆ. ಇಷ್ಟಕ್ಕೂ ನಾದ ಹೊಮ್ಮುವಾಗ ಖಂಡ, ದೇಶ, ಸಮಾಜದ ಗಡಿಗಳು, ಶಿಷ್ಟ ಜನಪದದ ಭೇದಗಳು ಅಳಿಯುತ್ತವೆಯಷ್ಟೆ. ಕಲೆಯ ಆತ್ಯಂತಿಕ ಸೃಜನಶೀಲತೆ ಇರುವುದೇ ಸಮಾನ ಮನಸ್ಕತೆಯಿದ್ದಾಗ ಸಹಜ ಬೆರೆಯುವಿಕೆಯಲ್ಲಿ.

ಬೀದಿಕಲೆಯ ವಿಷಯದಲ್ಲಿ, ಯೂರೋಪಿನ ಕಲಾವಿದರಿಗೂ, ನಮ್ಮ ವೇಷಗಾರರು, ಚೌಡಿಕೆಯವರು, ಜಾತಿಗಾರರು, ಫಕೀರರು, ಕೋಲೆತ್ತಿನವರು, ಗಣೆಯವರು, ಜೋಗಿತಿಯರು, ನೀಲಗಾರರು, ಹಗಲುವೇಷದವರು, ಜೋಗಿಗಳಿಗೂ ಎರಡು ವ್ಯತ್ಯಾಸಗಳಿವೆ. ಮೊದಲನೆಯದಾಗಿ, ನಮ್ಮಲ್ಲಿ ಬೀದಿಕಲೆಗೆ ಭಕ್ತಿ ಅನುಭಾವ ಪಂಥಗಳು ಲಗತ್ತಾಗಿವೆ. ಬೀದಿಗಾಯನಗಳಲ್ಲಿ ಸೂಫಿ, ಕಬೀರ, ಬಾವುಲರ ದರ್ಶನ ಮತ್ತು ಅನುಭಾವಿಕತೆಯು ಹೊಳೆಯಾಗಿ ಪ್ರವಹಿಸುತ್ತದೆ. ಧರ್ಮ, ಪಂಥ ಮತ್ತು ಸಂತ ಪರಂಪರೆಗಳು, ತಮ್ಮ ತತ್ವ ದರ್ಶನ ಮಹಿಮೆಗಳನ್ನು ಹರಡಲು ಚಾರಣ ಕಲಾವಿದರನ್ನು ಸೃಷ್ಟಿಸಿಕೊಂಡವು. ಆದರೆ ಪಾಶ್ಚಾತ್ಯರಲ್ಲಿ ಕಲೆಗೆ ಈ ಪರಿಯ ಧಾರ್ಮಿಕ ಲೇಪ ಕಡಿಮೆ. ಎರಡನೆಯದಾಗಿ, ನಮ್ಮ ಕಲಾವಿದರ